


International Journal of Kannada Research
www.kannadajournal.com

ISSN: 2454–5813
IJKR 2017; 3(4): 37-39
© 2017 IJKR
www.kannadajournal.com
Received: 10-08-2017
Accepted: 11-09-2017

**Dr. Buddappa Singe**
Associate Professor in Kannada
Govt Degree College Yadgir,
Karnataka, India

**Correspondence**
**Dr. Buddappa Singe**
Associate Professor in Kannada
Govt Degree College Yadgir,
Karnataka, India

# ಗೊಂದಲಿಗರ ಕಾವ್ಯ ಸಂಪ್ರದಾಯ

**Dr. Buddappa Singe**

ದೇವಿ ಆರಾಧಕರಾದ ಗೊಂದಲಿಗರು ಬಹು ಪ್ರಾಚೀನ ಜನಾಂಗವಾಗಿದೆ. ಮೂಲತಃ ಇವರು ಧಾರ್ಮಿಕ ವೃತ್ತಿ ಗಾಯಕರಾಗಿದ್ದು, ತಮ್ಮ ಹೊಟ್ಟೆಪಾಡಿಗಾಗಿ ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಗಳಿಗೆ ಅಲೆದಾಡುತ್ತಾ ಜೀವನ ಸಾಗಿಸುತ್ತಿದ್ದಾರೆ. ಕರ್ನಾಟಕವಲ್ಲದೆ ಮಹಾರಾಷ್ಟ್ರ, ಆಂಧ್ರ ಪ್ರದೇಶ ಮುಂತಾದ ರಾಜ್ಯಗಳಲ್ಲಿ ಇವರು ಹರಡಿಕೊಂಡಿದ್ದಾರೆ. ತುಳಜಾಪುರ ಅಂಬಾಭವಾನಿ ಇವರ ಆರಾಧ್ಯ ದೇವತೆ.
"ಗೊಂದಲಕ್ಕೆ ಸಂವಾದಿಯಾಗಿ ಗೊಂದಲೀ, ಗೊಂದಲ, ಗೋಂದೋಳು, ಗೊಂಡಗೇ, ಗೊಂಡಲೀ, ಗೊಂದಣ, ಗೌಂಡಲೀ, ಗೊಂದಲೀ, ಕುಂಡಲೀ, ಗೊಂದಳ್ ಮೊದಲಾದ ಪದ ಪ್ರಯೋಗಗಳಿವೆ. 'ಗೊಂದಲಿಗ' ಎನ್ನುವುದು ಜಾತಿ ಸೂಚಕ ಪದ. ವಿಶೇಷ ಸಂದರ್ಭಗಳಲ್ಲಿ ದೇವಿ ಗುಡಿಯ ಮುಂದೆ ಅಥವಾ ಭಕ್ತರ ಮನೆಯಲ್ಲಿ ಹೆಣ್ಣು-ಗಂಡೆಂಬ ಬೇಧವಿಲ್ಲದೆ ದೇವಿ ಕುರಿತು ಮಾಡುವ ಆರಾಧನೆ ರೀತಿಗೆ 'ಗೊಂದಲ ಹಾಕುವುದು' ಎಂದು ಕರೆಯುತ್ತಾರೆ. ಗೊಂದಲಿಗರು ಹಣೆಗೆ ಭಂಡಾರ, ಕುಂಕುಮ ಧರಿಸುವ ರೂಢಿ ಇದೆ. ಇವರ ತಂಡಗಳಲ್ಲಿ ಇಬ್ಬರು, ಮೂವರು ಜನ ಇರುತ್ತಾರೆ. ಸಂಬಾಳ, ತುಂತುಣಿ, ತಾಳ, ಮೇಳಗಳೊಂದಿಗೆ ಹಾಡು ಹೇಳುತ್ತಾರೆ. ಆದಿಶಕ್ತಿ ಅಂಬಾ ಭವಾನಿಯ ಸ್ವರೂಪಗಳಾದ ತಮ್ಮ ಪ್ರಾದೇಶಿಕ ಸ್ತ್ರೀ ದೇವತೆಗಳನ್ನು ಗೊಂದಲ ಹಾಕುವ ಸಂದರ್ಭದಲ್ಲಿ ಇವರು ನೆನೆಯುತ್ತಾರೆ.
ಮದುವೆಗಳಲ್ಲಿ, ಮಂಗಲ ಕಾರ್ಯಗಳಲ್ಲಿ ಹೊತ್ತ ಹರಕೆ ಕೈಗೂಡಿದಾಗ ಸಂಪತ್ತು ವೃದ್ಧಿಸಿದಾಗ ಜನರು ಇವರನ್ನು ಕರೆದು ಗೊಂದಲವೆಂಬ ಪೂಜಾ ವಿಧಿಯನ್ನು ತಮ್ಮ ತಮ್ಮ ಮನೆಗಳಲ್ಲಿ ಮಾಡಿಸಿ, ಅವರಿಗೆ ಗೌರವ ಸಂಭಾವನೆಯನ್ನು ನೀಡುವರು.ದೇವಿಯ ಹೆಸರಿನ ಮೇಲೆ ಮನೆ ಮನೆ ತಿರುಗಿ ಅಂಬಾ ಭವಾನಿಯ ಮಹಿಮೆ ಮತ್ತು ಭಕ್ತಿಯನ್ನು ಇವರು ಜನಮನದಲ್ಲಿ ಮೂಡಿಸುತ್ತಾರೆ. ಮನೆಯವರೆಗೆ ಬಂದ ಗೊಂದಲಿಗರನ್ನು ಜನರು ಭಯ ಭಕ್ತಿಯಿಂದ ಕರೆದು ದವಸ ಧಾನ್ಯಗಳನ್ನು ಕೊಡುತ್ತಾರೆ.
ಹೈದ್ರಾಬಾದ ಕರ್ನಾಟಕದಲ್ಲಿ ಗೊಂದಲಿಗರು ವಿಪುಲ ಸಂಖ್ಯೆಯಲ್ಲಿದ್ದಾರೆ. ಬಡತನದ ಬವಣೆಯಲ್ಲಿ ಬೆಂದ ಇವರು ತಮ್ಮ ಕಲೆಯನ್ನೇ ಆಶ್ರಯಿಸಿ ಉಪಜೀವನ ಸಾಗಿಸುತ್ತಿದ್ದಾರೆ. ಗೊಂದಲಿಗರಲ್ಲಿ ನೂರಾರು ಹಾಡು, ಕಥೆಗಳು 'ಮಾನಸಿಕ ಪಠ್ಯವಾಗಿ' ಇಂದು ಉಳಿದು ಬಂದಿವೆ. ಇವರು ತಮ್ಮ ವಾದ್ಯಗಳೊಂದಿಗೆ ಹಾಡುವಾಗ ಭಕ್ತಿ ಪರವಶರಾಗುತ್ತಾರೆ. ಪ್ರೇಕ್ಷಕರನ್ನು ಮಂತ್ರ ಮುಗ್ಧರನ್ನಾಗಿಸುತ್ತಾರೆ. ಮುಮ್ಮೇಳ, ಹಿಮ್ಮೇಳಗಳ ರೂಪದಲ್ಲಿ ಕಾವ್ಯದ ಜಲಧಾರೆ, ಚಿಮ್ಮುತ್ತದೆ. ಗೊಂದಲಿಗರ ಹಾಡುಗಳು ನೀತಿ, ತತ್ವ, ಹಾಸ್ಯ, ದೇವಿಯ ಸ್ತೋತ್ರ ಕುರಿತವುಗಳಾಗಿರುತ್ತವೆ. ಇವರ ಮೇಲೆ ಈ ಭಾಗದ ಶರಣರ, ದಾಸರ ಪ್ರಭಾವ ವಿಶೇಷವಾಗಿದ್ದುದನ್ನು ಸ್ಪಷ್ಟವಾಗಿ ಗುರುತಿಸಬಹುದಾಗಿದೆ. ಅಲ್ಲದೆ ಹೆಣ್ಣು ಹೆಚ್ಚೆಂದು ಹಾಡುವ, ಶಕ್ತಿಯ ಮಹಿಮೆ ಕುರಿತು ಹೇಳುವ 'ನಾಗೇಶಿ ಹಾಡುಗಳು' ಗೊಂದಲಿಗರ ಹಾಡುಗಳಲ್ಲಿ ಪ್ರವೇಶ ಪಡೆದಿವೆ. ಹಾಗೇ ಕಡಕೋಳ ಮಡಿವಾಳಪ್ಪ ಮತ್ತು ಶಿಶುನಾಳ ಶರೀಫರ ಭಜನೆಯ ಹಾಡುಗಳು ಇವರ ಹಾಡುಗಳಲ್ಲಿ ಸೇರಿಕೊಂಡಿವೆ. ತಮ್ಮ ಆಟದ ಮಧ್ಯೆ ಹಾಡುಗಳನ್ನು ಬಳಸಿಕೊಳ್ಳುತ್ತಾರೆ. ಜೋಗುಳ ಹಾಡುಗಳನ್ನು ತಮ್ಮ ದಾಟಿಗೆ ಕೂಡಿಸಿಕೊಂಡಿದ್ದಾರೆ. ಈ ಪ್ರದೇಶದ ಪ್ರಮುಖ ಸಣ್ಣಾಟಗಳಾದ ಗುಣಲೋಪ, ನಂದ-ಗೋಪಾಲ, ರತ್ನಕಲಿ ಮುಂತಾದ ಆಟಗಳು ಗೊಂದಲದ ಮಧ್ಯ ನಡೆಸಿಕೊಡುತ್ತಾರೆ. ಗೊಂದಲ ಹಾಕಿಸುವರ ಮನೆಯ ಮುಂದೆ, ಇಲ್ಲವೆ ಊರಿನ ದೇವಿಯ ಆವರಣದಲ್ಲಿ, ಚೌಡಿ ಕಟ್ಟೆಗಳಲ್ಲಿ ಸರಳವಾದ ರಂಗದ ಮೇಲೆ ತಮ್ಮ ಕಲೆಯನ್ನು ನಿರೂಪಣೆಗೊಳಿಸುತ್ತಾರೆ. ಗೊಂದಲಗಳಲ್ಲಿ "ಆಮಂತ್ರಣ ಗೊಂದಲ, ಬಯಲು ಗೊಂದಲ, ಗುಡಿ ಗೊಂದಲ, ಹರಕೆ ಗೊಂದಲ, ಗಳೆಂಬ ಪ್ರಕಾರಗಳಿವೆ. ಗೊಂದಲ ಹಾಕುವ ಸಂದರ್ಭದಲ್ಲಿ ಸಾಮಾನ್ಯವಾಗಿ ಹಾಡುಗಾರಿಕೆಗೆ ಮೊದಲು ಸ್ತುತಿ ಪದ್ಯ ಹೇಳುತ್ತಾರೆ.

ಆದಿ ಶಕ್ತಿ ಮಾತಾಯಿ ಜನನಿ ಗೊಂದಲ ಹಾಕುವೆ
ಮಾತಾಯಿ ಮಾಯಾ ಜನನಿ ಅಂಬಾದೇವಿ ಗೊಂದಲ ಹಾಕುವೆ
ಉಧೋ ಉಧೋ ದೇವಿ ಅಂಬಾ ಗೊಂದಲ ಹಾಕುವೆ
ಘತ್ತರಗಿ ದೇವಿ ಗೊಂದಲ ಹಾಕುವೆ
ತುಳಜಾ ಭವಾನಿ ಗೊಂದಲ ಹಾಕುವೆ
ಗೊಂದಲಿಗರ ಮಾಯಾ ಜನನಿ ಗೊಂದಲ ಹಾಕುವೆ
ಸಿಂಹ ಸಂವಾರ ಮಾಡು ಅಂಬಾ ಗೊಂದಲ ಹಾಕುವೆ
ಉಧೋ ಉಧೋ ಅಂಬಾ ದೇವಿ ಗೊಂದಲ ಹಾಕುವೆ
ಜೈ ಭವಾನಿ ಜೈ ಜನನಿ ಗೊಂದಲ ಹಾಕುವೆ
ದುಷ್ಟರ ಸಂಹಾರ ಮಾಡಿದ ದೇವಿ ಗೊಂದಲ ಹಾಕುವೆ
ಆದಿ ಶಕ್ತಿ ಜಗದಂಬೆ ಗೊಂದಲ ಹಾಕುವೆ
ದುಷ್ಟರ ಸಂಹಾರ ಮಾಡಿದ ದುರ್ಗಾದೇವಿ ಗೊಂದಲ ಹಾಕುವೆ
ಗೊಂದಲ ಹಾಕುವೆ ದೇವಿಗೆ ಉಧೋ ಉಧೋ

ಜಗದಂಬಾ ದೇವಿಯ ನಾನಾ ರೂಪಗಳನ್ನು, ಅವತಾರಗಳನ್ನು ಗೊಂದಲ ಹಾಕುವಾಗ ನೆನೆಸಿಕೊಳ್ಳುತ್ತಾರೆ. ಹಾಡಿನ ತಾಳಕ್ಕೆ ತಕ್ಕಂತೆ ಸಂಬಾಳ ಸದ್ದು ಮುಗಿಲು ಮುಟ್ಟುತ್ತದೆ. ಅದೆ ಗತ್ತಿಗೆ ತಕ್ಕಂತೆ ಮೂವರು ವಿಶಿಷ್ಟ ರೀತಿಯಲ್ಲಿ ಮೈಮರೆತು ಕುಣಿಯುತ್ತಾರೆ. ಹಆಡಿನ ಚರಣದ ಮೊದಲಲ್ಲಿ ಮತ್ತು ಕೊನೆಯಲ್ಲಿ ಎಳೆಯುವ ರಾಗಕ್ಕೆ ಮೂವರು ಶಕ್ತಿ ಮೀರಿದ ದನಿಯನ್ನು ಕೂಡಿಸುವಾಗ ಚಲನ ವಲನ ಸ್ತಬ್ದವಾಗುತ್ತದೆ. ಆ ಧ್ವನಿ ಮುಗಿದ ನಂತರ ಸಂಬಾಳದೊಡನೆ ಕ್ರಮಬದ್ಧವಾಗಿ ಮೂವರು ಕುಣಿತ ಮುಂದುವರೆಸುತ್ತಾರೆ. ಈ ಒಂದು ಘಟ್ಟದೊಡನೆ ಸ್ತೋತ್ರ ಮುಕ್ತಾಯಗೊಳ್ಳುತ್ತದೆ. ಆಗ ಭಕ್ತರ ಮೈ ಮನಗಳಲ್ಲಿ ಭಾವಾವೇಷ ಸಂಚರಿಸುತ್ತದೆ. ಹಾಡುಗಾರಿಕೆ ವಾದ್ಯಗಳ, ದಾಟಿಗಳ ಬದಲಾವಣೆಗಳಿಂದ ಆಕರ್ಷಕವಾಗಿ ಕಾಣುತ್ತದೆ.
ಸ್ತುತಿ ಮುಗಿದ ಮೇಲೆ ಜಗದಂಬೆಯನ್ನು ಸಭೆಗೆ ಸ್ವಾಗತಿಸುತ್ತಾರೆ.

ಬಾ ಜಗದಂಬಿ ನಿನ್ನ ಸ್ಮರಣೀಯ ಮಾಡುವೆ
ಭಕ್ತರ ಭಾವಕ ನೆಂಬಿ
ಬಾ ತಾಯಿ ಜಗಕೆ ಈ ಸಭಾಕೆ
ನಂಬಿದ ಭಕ್ತರಿಗೆ ದರ್ಶನ ತೋರ ತಾಯಿ
ಬಾರವ್ವ ಜಗದಂಬಿ ಭಕ್ತರ ಭಾವಕ ನೆಂಬಿ॥ಪ॥

ಹಾಡುಗಾರ ಹೀಗೆ ದೇವಿಯನ್ನು ಸಭೆಗೆ ಆಹ್ವಾನಿಸುವಾಗ ಆರಾಧ್ಯ ದೇವತೆಯೇ ಪ್ರತ್ಯಕ್ಷಳಾದಳು ಎಂಬ ನಂಬಿಕೆಯಲ್ಲಿ ಜನ ಮೈ ಮರೆಯುತ್ತಾರೆ. ಗೊಂದಲ ಹಾಕಿದ ಸ್ಥಳಕ್ಕೆ ಜಗದಂಬೆ ಹೇಗೆ ಬರುತ್ತಾಳೆ? ತಾಯಿ ಹೇಗೆ ಬರಬೇಕು? ಎನ್ನುವ ಅವರ ಕಲ್ಪನೆ ಅದ್ಭುತವಾದದ್ದು.

ಪರ್ವತ ಜರಿಜರಿ ನೆನೆದಾಳಂದದ ಸಿರಿ
ಗಗನಕ ಜಾಯರಿ ಏನಂದೆ ಗುಜ್ಜರಿ
ವಿಪರಿತ ಸುಂದರಿ ಕಂಡಾಳ ಮಹಿಮಾದ ಪರಿ
ಹೇ ಜಗದಂಬಾ ಮಾಹೊಂಬೋ ದೃಷ್ಟಾಕರಿ ॥ಪ॥
ಸಂಪನ್ನೆ ಮೂಗುತಿ ಸುರಬಾರ ತಾಗುತಿ
ನಾಗು ಬಂದ ಸೆಲ್ಯಾ ಮ್ಯಾಗ ಮುತ್ತಿನ ವಲ್ಯಾ
ಸಣ್ಣ ಚಂದ್ರಕಾಳಿ ಬಣ್ಣೀನ ಅಂಬಾರಿ ಕುಂಕುಮ
ಒಳಗೇರಿ ಪತ್ತಲ ರೇಶಮಿ ದಟ್ಟಿ ಪೀತಾಂಬರ
ಒಪ್ಪುವ ಸಾಡಿ ಕುಂದಣದ ಕಿಡಕಿ ರತ್ನದ ಹರಳಿಟ್ಟು
ಬಂಗಾರ ಟೊಪ್ಪಿಗೆ ಹೇ ಜಗದಂಬಾ ॥ಪ॥

ದೇವಿ ನೆಲಸಿದ ಕ್ಷೇತ್ರಗಳು ಮತ್ತು ಅವಳ ಅವತಾರಗಳನ್ನು ಹಾಡಿನ ಮೂಲಕ ಪ್ರೇಕ್ಷಕರಿಗೆ ತಿಳಿಸುತ್ತಾರೆ. ಜಗದಂಬೆಯ ಮೈ ಮೇಲಿನ ಬಟ್ಟೆ ಪೀತಾಂಬರ ಶಲ್ಯಾ, ಕುಂಕುಮ ಬಟ್ಟು, ಆಭರಣ ಇತ್ಯಾದಿಗಳನ್ನು ವರ್ಣಿಸುತ್ತಾರೆ.

ವಾಲಿ ಬುಗುಡಿ ಒಪ್ಪುವ ಕಿವಿಯಲ್ಲಿ ಚಂದ್ರಹಾರ ಕೊರಳಲ್ಲಿ
ಬಂಗಾರದ ಪಡಕವು ಸರಗಿ ಚಿತ್ತಕ ದೂವಾ
ಪುತ್ಥಳಿ ಸರವನಿಟ್ಟು ಶೃಂಗಾರ ಸರಮುಖ ಡಾಬಾರುಳಿಯವ ಉಟ್ಟು
ಬೆರಳಲ್ಲಿ ಕಾಲುಂಗರ ಪಿಲ್ಲೆ ಪೈಜಣವಿಟ್ಟು
ಅಷ್ಟ ಭೂಷಣ ಚಿನ್ನ ಜಗದಂಬಾಗ ಒಪ್ಪಿತ್ತು.
ಜಗದಾಗ ಹೊಳಿಯುತ ಬಾ ಜಗದಂಬಾ

ಜಗದಂಬೆಯ ವಾಲಿ, ಬುಗುಡಿ, ಪೈಜಣ, ಡಾಬ, ಕಾಲುಂಗರ, ಪಿಲ್ಲೆಗಳು ಸರಳ ಸುಲಭವಾದ ರೀತಿಯಲ್ಲಿ ವರ್ಣಿಸುತ್ತಾರೆ.
ಅಲಂಕೃತವಾದ ಉತ್ಸವ ಮೂರ್ತಿಯ ಬಗ್ಗೆ ಜನರಿಗೆ ಪರಿಚಯಿಸುತ್ತಾರೆ.

ಪುಣೆದ ಪ್ರಭುತಿ ಮುಂಬಯಿ ಮಾಯಾದೇವಿ ಶ್ರೇಷ್ಠಳು ಮಹಾಕಾಳಿ
ಕಲ್ಕತ್ತಾದಲ್ಲಿ ನರರ ಹಸ್ತದ ಉಡಗಿ ಉಟ್ಟರಿವಿ ಮಡಿಯಲಿ
ಶಿರಗಳ ರುಂಡ ಮಾಲಿ ನಿನ್ನ ಕೊರಳಲ್ಲಿ ಶಂಖ ಚಕ್ರ ಪದ್ಮ ಖಡ್ಗ ಹಸ್ತದಲ್ಲಿ
ಮುಢಹರ ತ್ರಿಶೂಲದಿಂದ ದುರ್ಗಾಸೂರನ ಕೊಲ್ಲಿ
ಶುಂಭ ನಿಶುಂಭರನ್ನ ಕೊಂದೆ ನಿಷ್ಠೆಲ್ಲಿ
ಅಹಂಕಾರ ಬಂದಿತ್ತು ಕೈಟಬ ದೈತ್ಯರಲ್ಲಿ
ಸುದರ್ಶನ ಚಕ್ರದಿಂದ ಸಂಹಾರ ಮಾಡಿದಿ ನೀನು ॥ಪ॥
ಹುಟ್ಟಿ ಮೂವರಗಡಾ ಬಂದೆ ತುಳಜಾಪೂರ
ಅಂಬಾಬಾಯಿ ಅನಸಿದಿ ಅರೆ ನಾಡದಲ್ಲಿ
ನಗ್ಗರ ಗಾಣಗ್ಯಾಗ ಪರಿಪರಿ ಕಾಡಿದಿ
ಮನಿಗೆ ಬೆಂಕಿ ಹಚ್ಚಿ ನಿನ್ನ ಗಿರಿಗೆ ತರಸಿದೆ ಬತ್ತಲಿ
ಕೊಲ್ಲಾಪೂರಕ ಹೋಗಿ ಲಕ್ಷ್ಮಿ ಅನಸಿದಿ
ಶಿವಾಜಿ ಕೈಯಲ್ಲಿ ಹತಿಯಾರ ಕೊಟ್ಟಿದಿ
ಪ್ರಬಲ ಮಾಡಿದಿ ದೇಶದ ಮ್ಯಾಲಿ
ಬನಶಂಕರಿ ಅನಸಿದಿ ಬದಾಮಿಯಲ್ಲಿ
ಕುಂಕುಮ ಭಂಡಾರ ಪುಷ್ಪದ ಮಾಲಿ ॥ಪ॥
ಹುಚ್ಚಂಗೆಮ್ಮನೆಂದು ಶೃತಿನಿಂದ ಸಾರುವುದು
ಹುಲಿಗೆಮ್ಮಾ ಮಾರೆಮ್ಮಾ ದಾನಮ್ಮ ದೇವಿ
ಪದ್ಮಾವತಿಯಾದಿ ಜೈನರ ಮತದಲ್ಲಿ
ಸಿರಸಂಗಿ ಕಾಳಮ್ಮ ಪಂಚಾಳರ ಕುಲದಲ್ಲಿ
ಚಂದ್ರು ತಾಯಿ ಅನಸಿದಿ ಸೀತಿ ಮನಿಯಲ್ಲಿ
ಹುತ್ತಿನೊಳಗೆ ಬೆಳದಿ ಧರ್ಮರ ಮಠದಲ್ಲಿ
ಸೌದತ್ತಿ ಕೊಕಟನೂರ ಜತ್ತಿ ಗ್ರಾಮದಲ್ಲಿ
ಎಲ್ಲಮ್ಮ ಎನಸಿದಿ ದೇಶ್ಯಾದ ಮ್ಯಾಲಿ
ಏಳು ಮಂದಿ ಸಿದ್ಧರ ಗುದ್ದವ ಹೋಗಸಿದಿ
ಏಳು ಸಿಸಿನ ಗುಂಡ ಒಡದಿದಿ ಅಲ್ಲಿ ॥ಪ॥
ಮಾಯಕ್ಕ ಅನಸಿದಿ ಚಿಂಚಲಿಯಲ್ಲಿ
ಮೊಸಾಬಿ ಅನಸಿದಿ ಉಡಚಿಯ ಹೊಳಿಯಲ್ಲಿ

ಸುರ್ಮಾವಲಿ ಅನಸಿದಿ ಮಕ್ಕಾ ಮದಿನಾದಲ್ಲಿ
ಚಾಮುಂಡೇಶ್ವರಿ ಅನಸಿದಿ ಮೊಗಲೇಶ್ವರದಲ್ಲಿ
ಚೌಡೇಶ್ವರಿ ಅನಸಿದಿ ಮಾಶ್ಯಾಳ ತಳದಲ್ಲಿ
ಮೂರು ವರ್ಷಕ್ಕೊಮ್ಮೆ ಜಾತುರಿ ನಡೆಸಿದಿ
ಏಳು ವರ್ಷದ ಕೂಸ ನುಂಗಿದಿ ಅಲ್ಲಿ
ಮಣ್ಣೂರ ಎಲ್ಲಮ್ಮಾ ಬೀಮ್ರತಾ ಹೊಳಿಯಲ್ಲಿ
ಸ್ಥಾಪನ ಆಗಿದ್ದು ತಾಂಬಾ ಗ್ರಾಮದಲ್ಲಿ
ನಡುವ ಊರಲ್ಲಿ ಗುಡಿಯ ಕಟ್ಟಿಸಿದಿ
ಹಾಲು ತುಪ್ಪಿನ ಕಾವಲಿ ಹರಸಿದಿ
ಪೂಜೆಯಾಗುವದು ನಿತ್ಯ ನಿಯಮದಲ್ಲಿ

ಹೀಗೆ ದೇವಿಯ ನಾನಾ ಅವತಾರಗಳನ್ನು ಹಾಡಿನ ಮೂಲಕ ಪರಿಚಯಿಸುತ್ತಾರೆ. ಅನೇಕ ರೀತಿಯಿಂದ ಜಗದಂಬೆಯನ್ನು ಕೊಂಡಾಡಿ ಮನೆ ದೇವರೆಂದು ಪೂಜಿಸುತ್ತಾರೆ. ದೇವಿಯ ಚರಿತ್ರೆ ಹೇಳಿ ಮುಗಿಸಿದ ನಂತರ ರಾಜ ಮಹಾರಾಜರ ಕುರಿತು ಕಥೆಗಳು ಹೇಳುತ್ತಾರೆ. ಸುಲೋಚನ, ಚಂಪಸೇನರಾಜ, ವಿಕ್ರಮರಾಜಾ, ನಳ ನೀಳ, ಬಾಳಾವತಿ, ಭಕ್ತ ಸಿರಿಯಾಳ, ನೀಲಕಂಠ, ಅನಸೂಯಾ, ಪದ್ಮಾವತಿ ಮುಂತಾದ ಕಥೆಗಳ ಪ್ರಸಂಗಗಳನ್ನು ಆರಿಸಿಕೊಂಡು ಜನರ ಅಪೇಕ್ಷೆಯ ಮೇರೆಗೆ ಗದ್ಯ-ಪದ್ಯಗಳ ಶೈಲಿಯಲ್ಲಿ ಹೇಳುತ್ತಾರೆ. ಇಡೀ ಪ್ರಸಂಗಗಳು ಹಾಡು ಮತ್ತು ಕಥೆಗಳ ಮಿಶ್ರಣದಲ್ಲಿ ಹೇಳುತ್ತಾರೆ. ದೇವಿಯ ಲೀಲೆಯನ್ನು ಜನತೆಯಲ್ಲಿ ಭಕ್ತಿ ಮೂಡುವಂತೆ ಸಾರಿ ಹೇಳುತ್ತಾರೆ. ಇಡೀ ರಾತ್ರಿ ಹಾಡು-ಕಥೆಗಳ ಮಧ್ಯ ಮನರಂಜನೆ ನೃತ್ಯ ಬೆರೆಸಿ ದೃಶ್ಯಕ್ಕೂ ಅವಕಾಶ ಕೊಡುತ್ತಾರೆ. ಬೆಳಗಿನ ಜಾವಕ್ಕೆ ಮಂಗಳಾರತಿಯೊಂದಿಗೆ ಹಾಡುಗಾರಿಕೆಗೆ ತೆರೆ ಎಳೆಯುತ್ತಾರೆ.

ಆರುತಿ ಬೆಳಗುವೆ ನಾ ಜಗದಂಬಿ ।
ಆರುತಿ ಬೆಳಗುವೆ ತಾಯಿ ಜಗದಂಬಿ ॥ಪ॥
ಕರಪುರದಾರುತಿ ಬೆಳಗುವೆ ದೇವಿಗೆ
ನಿರ್ಮಲವಾದ ಮನದಿಂದ ತಾಯಿಗೆ ॥1॥
ಚಿಂತೆ ಬಿಡುವಂತೆ ದೇವಿ ।
ಬ್ರಾಂತಿ ಕಡಿಯುತಲೆ ದೇವಿ
ಜಗದಂಬಾ ದೇವಿ ಎಲ್ಲರನ್ನು ರಕ್ಷಿಸಲೆಂದು ಕೊನೆಗೆ ಹರಕೆ ಕೊಟ್ಟು ಹರಸುತ್ತಾರೆ.

## References


1. ಕರ್ನಾಟಕದ ಜನಪದ ಕಲೆಗಳ ಕೋಶ, ಹಿ.ಚಿ. ಬೋರಲಿಂಗಯ್ಯ: ಪು-182, 1996
2. ಉತ್ತರ ಕರ್ನಾಟಕದ ಜಾನಪದ ಗೀತಮೇಳಗಳು ಒಂದು ಸಾಂಸ್ಕೃತಿಕ ಅಧ್ಯಯನ, ಡಾ. ವೀರೇಶ ಬಡಿಗೇರ: ಪು-125, 1999.
3. ಜಾನಪದ ವೈಭವ, ಡಾ. ಲಿಂಗಣ್ಣ ಸಣ್ಣಕ್ಕಿ: ಪು-5, 1991.
4. ಹೈದ್ರಾಬಾದ ಕರ್ನಾಟಕ ಜನಪದ ಸಾಹಿತ್ಯ: ಡಾ. ಬಸವರಾಜ ಪೊಲೀಸ್ ಪಾಟೀಲ್, ಪು-423, 2001.
5. ಉತ್ತರ ಕರ್ನಾಟಕದ ಜಾನಪದ ಗೀತ ಮೇಳಗಳು ಒಂದು ಸಾಂಸ್ಕೃತಿಕ ಅಧ್ಯಯನ: ಡಾ. ವೀರೇಶ ಬಡಿಗೇರ, ಪು-130, 1999.
6. ಹಾಡು ಹೇಳಿದವರು: ತುಕಾರಾಮ ಗೊಂದಳಿ, ಸಾ: ಬಂಕಲಗಿ, ತಾ: ಅಫಜಲಪೂರ 1999.
7. ಹಾಡು ಹೇಳಿದವರು: ತುಕಾರಾಮ ಗೊಂದಳಿ, ಸಾ: ಬಂಕಲಗಿ, ತಾ: ಅಫಜಲಪೂರ 1999
8. ಹಾಡು ಹೇಳಿದವರು: ಶಂಕರ ಲಕ್ಷ್ಮಣ ಗೊಂದಳಿ, ತಾಂಬಾ, ಸ್ಥಳ: ಗುಲಬರ್ಗಾ, 2001.
9. ಹಾಡು ಹೇಳಿದವರು: ಶಂಕರ ಲಕ್ಷ್ಮಣ ಗೊಂದಳಿ, ತಾಂಬಾ, ಸ್ಥಳ: ಗುಲಬರ್ಗಾ, 2001.
10. ಮಾಹಿತಿ ಹೇಳಿದವರು: ಮಹಾದೇವಪ್ಪ ಸಿದ್ರಾಮಪ್ಪ, ಧನಗರಗಲ್ಲಿ, ಬ್ರಹ್ಮಪುರ,ಗುಲಬರ್ಗಾ 1999
11. ಹೈದ್ರಾಬಾದ ಕರ್ನಾಟಕ ಜನಪದ ಸಾಹಿತ್ಯ: ಡಾ: ಬಸವರಾಜ ಪೊಲೀಸ್ ಪಾಟೀಲ್, ಪು-429, 2001